**<u>FDP 1/2016</u>** ಪಿ.ಡಬ್ಲ್ಯೂ:- **2**

ದಿನಾಂಕಃ **13-10-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ:- ಅರ್ಜಿದಾರರ ಪರ ವಕೀಲರಿಂದ:-</u>

ನಾನು ಈ ಅರ್ಜಿಯಲ್ಲಿ ಅರ್ಜಿದಾರನ ಪರ ಸಾಕ್ಷಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

1 ನೇ ಎದುರುದಾರರು ಅರ್ಜಿದಾರರಿಗೆ ಮರಣ ಶಾಸನವನ್ನು ಬರೆದು ಕೊಟ್ಟಿದ್ದು, ಸದರಿ ಮರಣ ಶಾಸನದಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮರಣ ಶಾಸನವನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :- 4(ಎ) ಮತ್ತು 7(ಎ), (ಬಿ) ಎದುರುದಾರರ ಪರ ವಕೀಲರಿಂದ:-</u>

1 ನೇ ಎದುರುದಾರರು ನನ್ನ ಅತ್ತೆ. 1 ನೇ ಎದುರುದಾರರ ಮಗಳನ್ನು ಮದುವೆಯಾಗುವ ಪೂರ್ವದಲ್ಲಿ ನಮಗೂ ಮತ್ತು 1 ನೇ ಎದರುದಾರರಿಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ನನ್ನ ಹೆಂಡತಿಯ ಹೆಸರು ಸಾಕಮ್ಮ ಅವರು ಈ ಪ್ರಕರಣದ 6 ನೇ ಎದುರುದಾರರಾಗಿರುತ್ತಾರೆ. ನಾನು ಮತ್ತು 1 ನೇ ಎದುರುದಾರರು ದೇವರ ಹೊನ್ನಾಳಿ ಗ್ರಾಮದ ವಾಸಿ ಎಂದರೆ ಸರಿ. 2 , 3 ಮತ್ತು 5 ನೇ ಎದುರುದಾರರು ದೇವರ ಹೊನ್ನಾಳಿ ಗ್ರಾಮದ ವಾಸಿಗಳು ಎಂದರೆ ಸರಿ. ನಿಪಿ-1 ದಾಖಲೆಗೆ ಸಾಕ್ಷಿಯಾಗಿ ಸಹಿ ಮಾಡಲು 1 ನೇ ಎದುರುದಾರರು ನನ್ನನ್ನು ಕರೆಯಿಸಿರುತ್ತಾರೆ. 1 ನೇ ಎದುರುದಾರರು ಕರಿಬಸಪ್ಪರವರಿಗೆ ಹೇಳಿ ನಿಪಿ-1 ನ್ನು ತಯಾರಿಸಿರುತ್ತಾರೆ. ನಿಪಿ-1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ . ನಿಪಿ-1 ದಾಖಲೆಗೆ ನಾನು ಸಹಿ ಮಾಡಿದ ದಿನದಂದು ನನ್ನ ಜೊತೆಯಲ್ಲಿ ಅರ್ಜಿದಾರರು ಸಹ ಇದ್ದರೂ ಎಂದರೆ ಸರಿಯಲ್ಲ. 1 ನೇ ಎದುರುದಾರರು ಎಷ್ಟನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಿಪಿ-1 ದಾಖಲೆಗೆ 1 ನೇ ಎದುರುದಾರರು ತನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ . 1 ನೇ ಎದುರುದಾರರು ನಿಪಿ-1 ದಾಖಲೆಗೆ ಸಾಕ್ಷಿಯಾಗಿ ಸಹಿ ಮಾಡಲು ಕೋರಿದ ಮೇರೆಗೆ ನಾನು ಹೋಗಿರುತ್ತೇನೆ. ನಾನು ನಿಪಿ-1 ದಾಖಲೆಯನ್ನು ತಯಾರಿಸುವ

ಸಮಯದಲ್ಲಿ ಹೋಗಿರುತ್ತೇನೆ. ನಿಪಿ-1 ದಾಖಲೆಗೆ ಮೊದಲು ಯಾರು ಸಹಿ ಮಾಡಿದವರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಕೊನೆಯಲ್ಲಿ ಚಂದ್ರಮ್ಮರವರು ಸಹಿಯನ್ನು ಮಾಡಿರುತ್ತಾರೆ. ನಿಪಿ-1 ದಾಖಲೆಯಲ್ಲಿ ಏನು ಬರೆದಿದೇ ಎನ್ನುವ ವಿಚಾರವನ್ನು ತಿಳಿದುಕೊಳ್ಳಲು ನಾನು ಯಾವುದೇ ಪ್ರಯತ್ನವನ್ನು ಮಾಡಿಲ್ಲ. ನಿಪಿ-1 ದಾಖಲೆಯಲ್ಲಿ ಯಾವ ಆಸ್ತಿಯ ಸರ್ವೆ ನಂಬರ್ ಮತ್ತು ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಬರೆದಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ನಮೂದಾಗಿರುವ ಆಸ್ತಿಯು 1 ನೇ ಎದುರುದಾರರಿಗೆ ತನ್ನ ಗಂಡನ ಮುಖಾಂತರ ಬಂದಿರುತ್ತದೆ. ನಿಪಿ-1 ದಾಖಲೆಯನ್ನು 1 ನೇ ಎದುರುದಾರರು ಬರೆಯುವ ಕಾಲಕ್ಕೆ 90 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ನಿಪಿ-1 ದಾಖಲೆಯನ್ನು ತಯಾರಿಸುವ ಸಂದರ್ಭದಲ್ಲಿ 1 ನೇ ಎದುರುದಾರರಿಗೆ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ಕನ್ನಡಕವನ್ನು ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ನಿಪಿ-1 ದಾಖಲೆಯನ್ನು ನಮೂದು ಮಾಡಿರುವ ಆಸ್ತಿಯನ್ನು ಬರೆದುಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಎದುರುದಾರರಿಗೆ ಅರ್ಜಿದಾರರು ಮತ್ತು 4 ನೇ ಎದುರುದಾರರು ಮಕ್ಕಳಾಗಿರುತ್ತಾರೆ. 4 ನೇ ಎದುರುದಾರರು ಈಗ ಮರಣ ಹೊಂದಿರುತ್ತಾರೆ. 4 (ಎ) ಎದುರುದಾರರು ಮತ್ತು ಅವರ ಮಕ್ಕಳು ಪ್ರತ್ಯೇಕವಾಗಿದ್ದಾರೆ ಮತ್ತು ಅರ್ಜಿದಾರರು 1 ರಿಂದ 3, 5 ಮತ್ತು 6 ರವರು ಒಟ್ಟಿಗೆ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನಮೂದಾಗಿರುವ ಆಸ್ತಿಯನ್ನು ಕಮಲಮ್ಮನವರ ಜೀವಿತ ಕಾಲದಿಂದ ಇಲ್ಲಿಯವರೆಗೆ ಉಳುಮೆ ಮಾಡುತ್ತಿದ್ದೇನೆಂದರೆ ಸಾಕ್ಷಿಯು ಇಲ್ಲ ಈಗೇ ಸುಮಾರು 3-4 ವರ್ಷಗಳಿಂದ ನಾನು ಉಳುಮೆ ಮಾಡುತ್ತಿದ್ದೇನೆ ಅದಕಕ್ಕಿಂತ ಪೂರ್ವದಲ್ಲಿ 5 ನೇ ಎದುರುದಾರರ ಗಂಡ ಉಳುಮೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. 1 ನೇ ಎದುರುದಾರರಿಗೆ ಅವಿದ್ಯಾವಂತರಾಗಿದುದ್ದರಿಂದ ಅವರಿಗೆ ನಿಪಿ-1 ದಾಖಲೆಯಲ್ಲಿ ಏನು ಬರೆದಿದೇ ಎಂಬ ವಿಚಾರ ಮತ್ತು ನಿಪಿ-1 ದಾಖಲೆಯಲ್ಲಿ ಯಾವ ಉದ್ದೇಶಕ್ಕೆ ತನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡರು ಎಂಬ ಸಾಮಾನ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ದಾಖಲೆಯನ್ನು 1 ನೇ ಎದುರುದಾರು ಖುದ್ದಾಗಿ ಬರೆಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ವಿದ್ಯಾಭ್ಯಾಸ ಮಾಡಿರುವ ಬಗ್ಗೆ ನನಗೆ ಮಾಹಿತಿ

ಇರುವುದಿಲ್ಲ. ಅರ್ಜಿದಾರರು , ನಾನು ಮತ್ತು ಚಂದ್ರಮ್ಮ ಸೇರಿಕೊಂಡು 1 ನೇ ಎದುರುದಾರರಿಗೆ ನಿಪಿ-1 ದಾಖಲೆಯನ್ನು ಬರೆದುಕೊಡುವ ಯಾವುದೇ ಹಿತಾಸಕ್ತಿ ಇಲ್ಲದೇ ಇದ್ದರೂ ಸಹ 4 (ಎ) ಮತ್ತು 7 (ಎ) ಮತ್ತು (ಬಿ) ಎದುರುದಾರರಿಗೆ ನಿಪಿ-1 ರಲ್ಲಿ ನಮೂದಾಗಿರುವ ಆಸ್ತಿಯಲ್ಲಿ ಅವರಿಗೆ ಭಾಗಶಃದಿಂದ ವಂಚಿತರನಾಗಿ ಮಾಡುವ ಉದ್ದೇಶದಿಂದ ನಿಪಿ-1 ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಆಸ್ತಿಯನ್ನು ಕೊಡಿಸಿ ಕೊಡುವ ಉದ್ದೇಶದಿಂದ ಮೋಸದಿಂದ ನಿಪಿ-1 ದಾಖಲೆಯನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ .
ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.